## REPORT OF KANNADOTHSAVA AND CULTURAL EVENTS

| | |
|---|---|
| **Title** | Kannadotsav-2022 |
| **Date** | 26.11.2022 |
| **Timing** | 11:00pm To 3:30pm |
| **Department And Association** | Kannada Department And Kannada Association |
| **Place** | New Auditorium |
| **Participants** | III[rd] Semester Bcom, BBA, BSC, BCA BA Students |


| | |
|---|---|
| **Resource Person With Qualification** | Pruthivi Bhut<br>(Famous Singer) Sa Re Ga Ma Pa Winner |

On the occasion of Kannada Rajyotsava, the program "Kannadotsav-2022" was organized on 26 11 2022 by the Kannada Department of 'St. Francis de Sales College' and Kannada Association. The following cultural competitions were organized for the meritorious students of this function. Off stage competitions like debating, pencil sketching, logo making, Singing competition, group singing competition. On Stage Competitions ,Group Dance Competition, Fashion Show Competition .

The detailed information is given below in Kannada


# <u>ಆಫ್ ಸ್ಟೇಜ್ ಸ್ಪರ್ಧೆಗಳು</u>


- ***ಚರ್ಚಾ ಸ್ಪರ್ಧೆ :*** ಈ ಸ್ಪರ್ಧೆಯಲ್ಲಿ "**ಜನಪದ ಆಚರಣೆಗಳು ಇಂದಿನ ಯುವಜನತೆಗೆ ಬೇಕೆ? ಬೇಡವೇ??** " ಎಂಬ ವಿಷಯವನ್ನು ನೀಡಲಾಗಿತ್ತು. ಪರ-ವಿರೋಧಗಳ ಚಟಾಪಟಿ, ಮಾತುಗಾರಿಕೆ ಜೋರಾಗಿ ನಡೆಯಿತು. ಹಳ್ಳಿ ಸೊಗಡಿನ ಜೊತೆಗೆ ಸಂಸ್ಕೃತಿಯ ತೊಟ್ಟಿಲುಗಳನ್ನು ಕಾಪಾಡಿಕೊಂಡು ಬರಬೇಕಾದ ಜವಾಬ್ದಾರಿ ಯುವಪೀಳಿಗೆಯದ್ದು ಎಂಬುದು ಒಂದು ಗುಂಪಿನ ವಾದವಾದರೆ, ಪ್ರಸ್ತುತ ಡಿಜಿಟಲ್ ಪ್ರಪಂಚಕ್ಕೆ ಅನುಗುಣವಾಗಿ ನಗರಗಳು ತನ್ನ ವಿಸ್ತಾರವನ್ನು ಹಬ್ಬಿಸುತ್ತಿದೆ. ಪ್ರತಿಕ್ಷಣ ಸಂಚಲನ ಸೃಷ್ಟಿಸುತ್ತಿರುವ 21ನೇ ಶತಮಾನವು ನಗರಗಳ ವ್ಯಾಮೋಹ, ಸಿಟಿ ಲೈಫ್ ಸ್ಟೈಲ್ ಗಳು ಇವತ್ತಿನ ಯುವಪೀಳಿಗೆಯನ್ನು ಆಕರ್ಷಿಸುತ್ತಿರುವುದುರ ಜೊತೆಗೆ ನಗರ ಸಂಸ್ಕೃತಿಗಳ ಕಡೆ ಮುಖ ಮಾಡಿರುವ ನಮಗೆ ಜನಪದ ಆಚರಣೆಗಳು ಬೇಡ ಎಂದು ತಮ್ಮ ವಾದಗಳನ್ನು ಮಂಡಿಸಿದರು. **ಪ್ರೊ. ಕಿಟ್ಟಪ್ಪ ರವರು,** ಈ ಸ್ಪರ್ಧೆಯ ಮುಖ್ಯಪಾತ್ರವನ್ನು ನಿಭಾಯಿಸಿ ಯಶಸ್ಸಿಗೆ ಕಾರಣರಾದರು.














- <u>**ಲೋಗೋ ಮೇಕಿಂಗ್ :**</u> ದಿನಾಂಕ 22-11-2022 ರಂದು **ಕನ್ನಡ ಸಂಘದ ಲೋಗೋ ರಚಿಸುವ ಸ್ಪರ್ಧೆ'** ಯನ್ನು ಏರ್ಪಡಿಸಲಾಗಿದ್ದು, ಸುಮಾರು 10 ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಮೊಬೈಲ್‌ಗಳ ಮೂಲಕ ಎಲ್ಲರ ಸಮಕ್ಷದಲ್ಲಿ ರಚಿಸಿದರು. **ಪ್ರೊ. ಕುಮಾರ.ಸಿ ರವರು** ಈ ಸ್ಪರ್ಧೆಯಲ್ಲಿ ಮುಖ್ಯ ಪಾತ್ರವನ್ನು ನಿಭಾಯಿಸಿ ಸ್ಪರ್ಧೆ ಸಂಪೂರ್ಣವಾಗಿ ಯಶಸ್ವಿಯಾಗಲು ಕಾರಣರಾದರು.




**<u>ಪೆನ್ಸಿಲ್ ಸ್ಕೆಚಿಂಗ್</u>** : ಈ ಸ್ಪರ್ಧೆಯನ್ನು ದಿನಾಂಕ 22-11-2022 ರಂದು ನಡೆಸಲಾಯಿತು. ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರಹಾಕುವ ಸೃಜನಶೀಲ ಕಲೆಯಾಗಿತ್ತು. '**ಕನ್ನಡ ಕವಿಗಳ ಚಿತ್ರಪಟ ಹಾಗೂ ಕಲೆ ಸಂಸ್ಕೃತಿ, ಜನಪದ ಕಲೆ**' ಗಳನ್ನು ಬಿಡಿಸುವ ಸ್ಪರ್ಧೆ ಇದಾಗಿತ್ತು. ಸುಮಾರು 45 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿ ವಿವಿಧ ಕವಿಗಳ ಚಿತ್ರಪಟ ನಾಡು ನುಡಿ, ಜನಪದ ಕಲೆಗಳ ಚಿತ್ರಗಳನ್ನು ಬಿಡಿಸುವಲ್ಲಿ ಉತ್ಸುಕರಾಗಿದ್ದರು. ಈ ಸ್ಪರ್ಧೆಯ ಮೂಲಕ ವಿದ್ಯಾರ್ಥಿಗಳ ಕಲೆಯನ್ನು ಪ್ರೋತ್ಸಾಹಿಸುವಂತೆ ಆಯಿತು. **ಡಾ. ಪ್ರಕಾಶ ರಂಜೇರೆ** ರವರ ನೇತೃತ್ವದಲ್ಲಿ ಈ ಸ್ಪರ್ಧೆಯು











ಸಂಪೂರ್ಣ ಯಶಸ್ವಿ ಪಡೆಯಿತು.

- **ಗಾಯನ ಸ್ಪರ್ಧೆ** : ದಿನಾಂಕ 22-11-2022 ರಂದು ನಡೆಸಲಾಯಿತು. ಸುಮಾರು ಹತ್ತಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ತೀರ್ಪುಗಾರರನ್ನು ಒಳಗೊಂಡಿದ್ದ ಈ ಸ್ಪರ್ಧೆಯು **ಜಾನಪದ ಗೀತೆ, ಭಾವಗೀತೆ, ಕನ್ನಡ ನಾಡು ನುಡಿಗೆ ಸಂಬಂಧಿಸಿದ ಗೀತೆ**ಗಳನ್ನು ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗನ್ನು ತಂದುಕೊಟ್ಟಿತು. **ಪ್ರೊ. ಕರಿಬಸವನ ಗೌಡ** ಈ ಸ್ಪರ್ಧೆಯ ಮುಖ್ಯಪಾತ್ರವನ್ನು ನಿಭಾಯಿಸಿ ಯಶಸ್ಸಿಗೆ ಕಾರಣರಾದರು.












- **ಸಮೂಹ ಗಾಯನ ಸ್ಪರ್ಧೆ**: ದಿನಾಂಕ 23-11-2022 ರಂದು ನಡೆಸಲಾಯಿತು. ಆರು ತಂಡಗಳನ್ನು ಒಳಗೊಂಡ ಈ ಸ್ಪರ್ಧೆಯು ನೆರೆದಿರುವ ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಸಂಭ್ರಮವನ್ನು ತುಂಬಲು ಕಾರಣವಾಯಿತು. ಒಂದಷ್ಟು ವಾದ್ಯಗಳನ್ನು ಬಳಸಿ **ಜನಪದ ಗೀತೆಗಳು, ಭಾವಗೀತೆಗಳು, ಹಾಗೂ ಕನ್ನಡ ನಾಡು ನುಡಿಗೆ ಸಂಬಂಧಿಸಿದ ಗೀತೆಗಳನ್ನು** ಹಾಡುವ ಮೂಲಕ ಭಾಷಾ ಅಭಿಮಾನವು ಇಮ್ಮಡಿಗೊಳಿಸಲು ಕಾರಣವಾಯಿತು. ತೀರ್ಪುಗಾರರ ನಿರ್ಧಾರವನ್ನು ಅಂತಿಮ ನಿರ್ಧಾರವಾಗಿ ಪರಿಗಣಿಸಲಾಯಿತು.

## ಆನ್ ಸ್ಟೇಜ್ ಸ್ಪರ್ಧೆಗಳು


- **ಸಮೂಹ ನೃತ್ಯ ಸ್ಪರ್ಧೆ** : ಕನ್ನಡೋತ್ಸವ -2022 ಶನಿವಾರದಂದು ಈ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ಹಾಗೂ ನೆರೆದಿರುವ ಎಲ್ಲರೂ ಹೆಚ್ಚು ಕಾತರದಿಂದ ಕಾದಂತಹ ಸ್ಪರ್ಧೆಗಳಲ್ಲಿ ಇದೂ ಒಂದು. ಈ ಸ್ಪರ್ಧೆಯು 7 ತಂಡಗಳನ್ನು ಒಳಗೊಂಡಿತ್ತು. ವಿಭಿನ್ನ ರೀತಿಯಲ್ಲಿ, ವಿಭಿನ್ನ ಶೈಲಿಯಲ್ಲಿ ತಮ್ಮ ನೃತ್ಯ ಪ್ರದರ್ಶಿಸುವ ಮೂಲಕ ವೇದಿಕೆಯನ್ನು ಮತ್ತಷ್ಟು ರಂಗುಗೊಳಿಸಿದರು. **ಜಾನಪದ ನೃತ್ಯ, ಯಕ್ಷಗಾನ ನೃತ್ಯ, ಕನ್ನಡ ಭಾಷಾಭಿಮಾನದ ನೃತ್ಯಗಳು, ಹಳದಿ - ಕೆಂಪು ವಸ್ತ್ರಾಭರಣ** ದೊಂದಿಗೆ ಎಲ್ಲೆಲ್ಲೂ ಕನ್ನಡ ಹಬ್ಬದ ಆಚರಣೆಯ ವಾತಾವರಣವು ಕಂಡಿತು. ತೀರ್ಪುಗಾರರನ್ನು ಒಳಗೊಂಡಿದ್ದ ಈ ಸ್ಪರ್ಧೆಯು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿತು.






COORDINATOR
Cultural Committee
St. Francis de Sales College
Bengaluru - 560100


PRINCIPAL
St. Francis de Sales College
Electronics City Post, Bangalore - 560 100




- **ಫ್ಯಾಷನ್ ಷೋ** : ಕನ್ನಡೋತ್ಸವ -2022 ಶನಿವಾರದಂದು ಈ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ಹಾಗೂ ನೆರೆದಿರುವ ಎಲ್ಲರೂ ಮತ್ತಷ್ಟುಉತ್ಸಾಹದಿಂದ ಕಾದಂತಹ ಸ್ಪರ್ಧೆಗಳಲ್ಲಿ ಇದೂ ಒಂದು. ಈ ಸ್ಪರ್ಧೆಯು 5 ತಂಡಗಳನ್ನು ಒಳಗೊಂಡಿತ್ತು.

## GALLERY






















PRINCIPAL
St. Francis de Sales College
Electronics City Post, Bangalore - 560 10